## III. ಭಾಷಾಭ್ಯಾಸ

**(ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಉ. ದಿಟ್ಟಿಸು : ಗುರುಗಳು ನನ್ನನ್ನೇ ದಿಟ್ಟಿಸಿ ನೋಡುತ್ತಿದ್ದರು.

ಪವಾಡ ಸದೃಶ : ಅಪಘಾತದಲ್ಲಿ ಕೆಲವರು ಪವಾಡ ಸದೃಶ ರೀತಿಯಲ್ಲಿ ಪಾರಾಗಿ ಬರುವುದಿದೆ.

ಕೃಪಾದೃಷ್ಟ : ದೇವರ ಕೃಪಾದೃಷ್ಟಿ ಸದಾ ನಮ್ಮ ಮೇಲಿರಬೇಕು.

ಸವಿನಿದ್ದೆ : ಬೆಳಗಿನ ಜಾವ ನಾವು ಸವಿನಿದ್ದೆಯಲ್ಲಿರುತ್ತೇವೆ.

ಅಹಿಂಸೆ : ಅಹಿಂಸೆಯು ನಮ್ಮ ಮೂಲಮಂತ್ರವಾಗಬೇಕು.

ಶಿರಸಾವಹಿಸಿ : ಗುರುಗಳ ಹಾಗೂ ತಂದೆತಾಯಿಗಳ ಮಾತನ್ನು ನಾವು ಶಿರಸಾವಹಿಸಿ ಪಾಲಿಸಬೇಕು.

ಸತ್ಕಾರ್ಯ : ಹಲವು ಮಹನೀಯರು ತಮ್ಮನ್ನು ಸತ್ಕಾರ್ಯಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.

ಆ. ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.

ಸಹಸ್ರ = ಸಾಸಿರ

ಸೃಷ್ಟಿ = ಸಿಷ್ಟಿ, ಸಿಟ್ಟಿ

ಧರ್ಮ = ಧಮ್ಮ

ಆಗಸ = ಆಕಾಶ

ದಿಟ್ಟಿ = ದೃಷ್ಟಿ

ಕ್ಷಣ = ಚಣ

ಪಯಣ = ಪ್ರಯಾಣ

ಯುದ್ಧ = ಜುದ್ಧ

ಇ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.

ಕೃತಜ್ಞತೆ × ಕೃತಘ್ನತೆ

ಸತ್ಕಾರ್ಯ × ದುಷ್ಕಾರ್ಯ

ಅದೃಷ್ಟ × ದುರಾದೃಷ್ಟ

ಅಸಹನೆ × ಸಹನೆ

ದಯೆ × ನಿರ್ದಯೆ

ಅನಿರೀಕ್ಷಿತ × ನಿರೀಕ್ಷಿತ

ಹಿಂಸೆ × ಅಹಿಂಸೆ

ಈ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ನೆಲಕ್ಕಪ್ಪಳಿಸು = ನೆಲಕ್ಕೆ + ಅಪ್ಪಳಿಸು

ಅಂಗಾಂಗ = ಅಂಗ + ಅಂಗ

ದಿಗಂತ = ದಿಕ್ + ಅಂತ

ಅತ್ಯಂತ = ಅತಿ + ಅಂತ

ದಿಗ್ವಿಜಯ = ದಿಕ್ + ವಿಜಯ

ಕಳೆಗುಂದು = ಕಳೆ + ಕುಂದು

ಉ. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಯುದ್ಧ : ಸಮರ, ಕಾಳಗ

ಭೂಮಿ : ಇಳೆ, ಧರೆ

ಆರಾಧಿಸು : ಪೂಜಿಸು, ಪ್ರಾರ್ಥಿಸು, ಸೇವಿಸು

ಯಾತನೆ : ನೋವು, ಸಂಕಟ

II. ಪ್ರಶ್ನೆಗಳು :

(ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕಲಾಂ ಅವರು ಸಾಮಾನ್ಯವಾಗಿ ನಿತ್ಯ ಎಷ್ಟು ಗಂಟೆಗೆ ಮಲಗಿ, ಎಷ್ಟು ಗಂಟೆಗೆ ಏಳುತ್ತಿದ್ದರು?

ಉ. ಕಲಾಂ ಅವರು ಸಾಮಾನ್ಯವಾಗಿ ನಿತ್ಯ ರಾತ್ರಿ ಒಂದು ಗಂಟೆಗೆ ಮಲಗಿ ಬೆಳಿಗ್ಗೆ ಆರು ಗಂಟೆಗೆ ಏಳುತ್ತಿದ್ದರು.

2. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವುದು?

ಉ. ಕಲಾಂ ಅವರು ಕನಸಿನಲ್ಲಿ ಮರುಭೂಮಿ ಪ್ರದೇಶವನ್ನು ಕಂಡರು.

3. ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರು ಯಾರು?

ಉ. ಕಲಾಂ ಅವರು ಕನಸಿನಲ್ಲಿ ಕಂಡ ಐವರು ಮಹಾಪುರುಷರೆಂದರೆ – ಮಹಾತ್ಮಾಗಾಂಧಿ, ಆಲ್ಬರ್ಟ್ ಐನ್‌ಸ್ಟೀನ್, ಚಕ್ರವರ್ತಿ ಅಶೋಕ, ಅಬ್ರಹಾಂ ಲಿಂಕನ್, ಕ್ಯಾಲಿಫ್ ಒಮರ್.

4. ಅಶೋಕನು ಪ್ರತಿಪಾದಿಸಿದ ಧರ್ಮ ಯಾವುದು?

ಉ. ಅಶೋಕನು ಪ್ರತಿಪಾದಿಸಿದ ಧರ್ಮ ಅಹಿಂಸಾಧರ್ಮ.

5. ಅಶೋಕನ ಪ್ರಕಾರ ನಿಜವಾದ ಗೆಲುವು ಯಾವುದು?

ಉ. ಅಶೋಕನ ಪ್ರಕಾರ ಶಾಂತಿ ನೆಮ್ಮದಿಯ ಸಾಮ್ರಾಜ್ಯ ನಿರ್ಮಾಣವೇ ನಿಜವಾದ ಗೆಲುವು.

(ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕಲಾಂ ಅವರು ರಾಂಚಿಯಿಂದ ಬೊಕಾರೋಗೆ ವಿಮಾನದಲ್ಲಿ ತೆರಳುವಾಗ ಯಾವ ದುರ್ಘಟನೆ ನಡೆಯಿತು?

ಉ. ಕಲಾಂ ಅವರು 2001 ಸೆಪ್ಟೆಂಬರ್ 30ರಂದು ರಾಂಚಿಯಿಂದ ಬೊಕಾರೋಗೆ ಪ್ರಯಾಣಿಸುತ್ತಿದ್ದರು. ಅವರನ್ನು ಕರೆದೊಯ್ಯುತ್ತಿದ್ದ ಹೆಲಿಕಾಪ್ಟರ್‌ನ ಎಂಜಿನ್‌ನಲ್ಲಿ ಏನೋ ದೋಷ ಕಾಣಿಸಿಕೊಂಡಿತು. ಇನ್ನೇನು ಹೆಲಿಕಾಪ್ಟರ್ ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕೆ ಅಪ್ಪಳಿಸಿತು.

2. ಕಲಾಂ ಅವರಿಗೆ ನಿದ್ದೆಯಲ್ಲಿ ಯಾವ ಯಾವ ಯೋಚನೆಗಳು ಸುಳಿದಾಡಿದವು?

ಉ. ಕಲಾಂ ಅವರಿಗೆ ಸವಿನಿದ್ದೆಯಂತೂ ಬಂದಿರಲಿಲ್ಲ. ಮಧ್ಯೆ ಮಧ್ಯೆ ಎಚ್ಚರಗೊಳ್ಳುತ್ತಿದ್ದರು. ಆಗ ಏನೇನೋ ಯೋಚನೆಗಳು ಸುಳಿದಾಡುತ್ತಿದ್ದವು. ಆ ದೇವರ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠವಾದುದೆನ್ನಲಾದ ಮಾನವ ಕುಲ ಏಕೆ ಇಷ್ಟೊಂದು ವಿಭಜಿತವಾಗಿದೆ. ಇಷ್ಟೊಂದು ಹಿಂಸಾಚಾರಗಳಲ್ಲಿ ಏಕೆ ತೊಡಗಿಸಿಕೊಳ್ಳುತ್ತಿದೆ? ಹೀಗೆ ಏನೇನೋ ಯೋಚನೆಗಳು ಸುಳಿದಾಡಿದವು.

3. ಕಲಾಂ ಅವರು ಕನಸಿನಲ್ಲಿ ಕಂಡ ಪ್ರದೇಶ ಯಾವ ರೀತಿ ಇತ್ತು?

ಉ. ಕಲಾಂ ಅವರು ಕನಸಿಗಿಂತ ಎಷ್ಟೋ ಹೆಚ್ಚು ಸ್ಫುಟವಾದ ಅನುಭವದಲ್ಲಿ ಒಂದು ಮರುಭೂಮಿಯಲ್ಲಿ ಅವರಿರುವಂತೆ ಕಂಡರು. ಸುತ್ತ ಎತ್ತ ನೋಡಿದರೂ ಬರೀ ಮರಳು! ಮೈಲಿ-ಮೈಲಿ ಗಟ್ಟಲೆ ಮರಳು, ದೂರದಿಗಂತದವರೆಗೂ. ಆಗಸದಲ್ಲಿ ಪೂರ್ಣಚಂದ್ರ, ಮರಳುಗಾಡಿನುದ್ದಕ್ಕೂ ಹಾಲು ಬೆಳದಿಂಗಳನ್ನು ಕಂಡರು.

4. ಅಶೋಕನು ನಡೆಸಿದ ಎರಡು ಬಗೆಯ ಬದುಕು ಯಾವುದು?

ಉ. ಅಶೋಕನು ಎರಡು ಬಗೆಯ ಬದುಕು ಸಾಗಿಸಿದವನು. ಒಂದು ನಿರ್ದಯಿ, ಆಕ್ರಮಣಕಾರನಾಗಿ ಹಾಗೂ ಇನ್ನೊಂದು ದಯಾಮಯ ಆಡಳಿತಗಾರನಾಗಿ.

5. ಕಳಿಂಗ ಯುದ್ಧದ ಪರಿಣಾಮವೇನು?

ಉ. ಕಳಿಂಗ ಯುದ್ಧವು ಕಡಿಮೆಯೆಂದರೂ ಮೂರು ಲಕ್ಷ ಜನರ ಬಲಿತೆಗೆದುಕೊಂಡಿತ್ತು. ಅಷ್ಟೇ ಸಂಖ್ಯೆಯ ಜನ ತಮ್ಮ ಅಂಗಾಂಗಗಳನ್ನು ಕಳಕೊಂಡಿದ್ದರು. ಅದು ಅಸಂಖ್ಯ ಜನರ ಸಾವು ನೋವಿಗೆ ಕಾರಣವಾಯಿತು.

6. ಕಲಾಂ ಅವರಿಗೆ ಕನಸಿನಲ್ಲಿ ಅಶೋಕನು ಕಂಡಿದ್ದು ಹೇಗೆ?

ಉ. ಕಲಾಂ ಅವರ ಕನಸಿನಲ್ಲಿ ಅಶೋಕ ಆಗ ತಾನೇ ದಿಗ್ವಿಜಯ ಸಾಧಿಸಿ ಮರಳಿ ಬಂದಂತಿದ್ದ. ಮರಳುಗಾಡಿನಲ್ಲಿ ಎಲ್ಲರೂ ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು.

(ಈ) ಸಂದರ್ಭದೊಡನೆ ವಿವರಿಸಿರಿ.

1. **ನಾವು ನಿಜಕ್ಕೂ ಅದೃಷ್ಟ ಮಾಡಿರಬೇಕು!**

ಉ. **ಆಯ್ಕೆ:** ಈ ವಾಕ್ಯವನ್ನು ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಪ್ರಜ್ವಲಿತ ದೀಪಗಳು' ಪುಸ್ತಕದ ಕನಸು ಮತ್ತು ಸಂದೇಶ ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** 2001ರ ಸೆಪ್ಟೆಂಬರ್ 30ರಂದು ರಾಂಚಿಯಿಂದ ಬೊಕಾರೋಗೆ ಕಲಾಂ ಅವರು ಪ್ರಯಾಣಿಸುತ್ತಿದ್ದರು. ಹೆಲಿಕಾಪ್ಟರ್ ಇನ್ನೇನು ಭೂಸ್ಪರ್ಶ ಮಾಡಬೇಕೆನ್ನುವಷ್ಟರಲ್ಲಿ ಭಾರೀ ಸದ್ದಿನೊಂದಿಗೆ ನೆಲಕ್ಕಪ್ಪಳಿಸಿತು. ಆದರೂ ಎಲ್ಲರೂ ಪವಾಡ ರೀತಿಯಲ್ಲಿ ಬದುಕುಳಿದರು. ಇದನ್ನು ಕಲಾಂ ಮೇಲಿನಂತೆ ಹೇಳುತ್ತಾರೆ.

**ಸ್ವಾರಸ್ಯ :** ಕಲಾಂ ಅವರು ತಾವು ಬದುಕಿ ಬಂದ ರೀತಿಯನ್ನು ಇಲ್ಲಿ ಹೇಳಿದ್ದಾರೆ.

2. **ನನ್ನ ಅತ್ಯಂತ ಮೆಚ್ಚಿನ ಮಹಾಪುರುಷರು ಅವರು ನಾನು ಆರಾಧಿಸುವಂಥವರು.**

ಉ. **ಆಯ್ಕೆ:** ಈ ವಾಕ್ಯವನ್ನು ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಪ್ರಜ್ವಲಿತ ದೀಪಗಳು' ಪುಸ್ತಕದ ಕನಸು ಮತ್ತು ಸಂದೇಶ ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಬೊಕಾರೋದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕಲಾಂ ಅವರು ಭಾಷಣ ಮಾಡಿದ ರಾತ್ರಿ ಅವರಿಗೆ ಸವಿನಿದ್ದೆ ಬರಲಿಲ್ಲ. ಏನೇನೋ ಯೋಚನೆಗಳು ಬರ ತೊಡಗಿದವು. ಅಷ್ಟರಲ್ಲಿ ಐವರು ಮಹಾಮೇಧಾವಿಗಳು ಏನನ್ನೋ

ಮಾತನಾಡುತ್ತಿರುವಂತೆ ಭಾಸವಾಯಿತು. ಅವರು ನನ್ನ ಅತ್ಯಂತ ಮೆಚ್ಚಿನ ಮಹಾಪುರುಷರಾಗಿದ್ದರೆಂದು ಕಲಾಂ ಹೇಳಿದ್ದಾರೆ.

ಸ್ವಾರಸ್ಯ : ಕನಸಿನಲ್ಲಿ ಬಂದ ದೃಶ್ಯದ ಕುರಿತು ಹೇಳಿದ್ದಾರೆ.

3. ಅಹಿಂಸಾ ಧರ್ಮದ ಉದಯವಾಯಿತು